ಮಹಿಳೆಯರ
ಉಪಯೋಗಿಸಿಕೊಳ್ಳುವಲ್ಲಿ ಹಿಂದೆ ಬಿದಿದ್ದಾರೆ. ಕೆಲವೊಂದು ಕ್ಷೇತ್ರದಲ್ಲಿ ಮಹಿಳೆಯರಿಗೆ ಅವಕಾಶಗಳು ಕಡಿಮೆ ಇವೆ ಆದರೆ ಅವುಗಳಲ್ಲಿ ಸಾಧನೆ ಮಾಡಿ ಸಾಧಕರ ಸಾಲಿನಲ್ಲಿ ನಿಲ್ಲಬೇಕು. ಯಾವುದೇ ಸಾಧನೆ ಮಾಡಲು ಹೊರಟವರಿಗೆ ತೊಂದರೆಗಳು ಬರುವುದು ಸಹಜ ತೊಂದರೆಗಳನ್ನು ಲೆಕ್ಕಿಸದೆ ಮುನ್ನುಗ್ಗಿದಾಗ ಮಾತ್ರ ಸಾಧನೆ ಮಾಡಲು

ಕಲ್ಪನೆಯಲ್ಲಿ ಕಲ್ಯಾಣ ಕರು ಚಿತ್ರ ಡಿವಿಡಿಯನ್ನು ಪ್ರೊ. ಮಾಲತಿ ಪಟ್ಟಣಶೆಟ್ಟಿ ಬಿಡುಗಡೆ ಮಾಡಿದರು. ಹಿರಿಯ ಸಾಹಿತಿ ಮೋಹನ ನಾಗಮ್ಮನವರ, ಸಾಧನಾ ಮಹಿಳಾ ಚಿಂತನಾ ವೇದಿಕೆ ಸಂಸ್ಥಾಪಕಿ ಡಾ. ಇಸಾಬೆಲ್ಲಾ ಜೇವಿಯರ, ಎಂ. ರಂಗನಾಥ, ರಮೇಶ ಗುಗುನಾ, ಸಿದ್ದರಾಮ ನಡಕಟ್ಟಿ ಇತರರಿದ್ದರು.

ಅಭಿವೃದ್ಧಿಗಾಗಿ ಶ್ರಮಿಸಬೇಕು ಎಂದರು.

ಧಾರವಾಡದ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕಿನ ವ್ಯವಸ್ಥಾಪಕ ರವಿ ಸಾವಂತ ಮಾತನಾಡಿ, ಡಿಜಟಲೀಕರಣ ಮತ್ತು ನಗದು ರಹಿತ ವಹಿವಾಟುಗಳ ಅನುಕೂಲತೆ ಮತ್ತು ಅನಾನುಕೂಲತೆಗಳ ಕುರಿತಾಗಿ ಗ್ರಾಮದ ಜನರಿಗೆ ಇಂತಹ ಉಪನ್ಯಾಸ ಕಾರ್ಯಕ್ರಮವು ತುಂಬಾ ಅವಶ್ಯಕವಾಗಿದೆ. ಇ-ಬ್ಯಾಂಕಿಂಗ್,

# ಮೋಡ ಬಿತ್ತನೆಗಿಂತ ಮರಗಳ ಬಿತ್ತನೆ ಉತ್ತಮ



ಡಾ. ಆನಂದ ಪಾಂಡುರಂಗಿ ದೀಪ ಬೆಳಗುವುದರ ಮೂಲಕ ಕಾರ್ಯಾಗಾರವನ್ನು ಉದ್ಘಾಟಿಸಿದರು.

**ವಿಶ್ವವಾಣಿ ಸುದ್ದಿಮನೆ** ಧಾರವಾಡ

ಈಗಿನ ದಿನಮಾನದಲ್ಲಿ ಮೋಡ ಬಿತ್ತನೆಗಿಂತ ಮರಗಳ ಬಿತ್ತನೆ ಮಾಡುವುದು ಉತ್ತಮ. ಮರಗಳ ಸಂಖ್ಯೆ ಕಡಿಮೆಯಾಗಿರುವುದರಿಂದ ಮಳೆ ಪ್ರಮಾಣ ಕಡಿಮೆಯಾಗಿ ಬರಗಾಲದಂತಹ ಪರಿಸ್ಥಿತಿ ಎದುರಿಸಬೇಕಾಗಿದೆ ಎಂದು ಡಾ. ಆನಂದ ಪಾಂಡುರಂಗಿ ಹೇಳಿದರು.

ಈಚೆಗೆ ಎಸ್‌ಡಿಎಂ ಎಂಜಿನಿಯರಿಂಗ್ ಕಾಲೇಜಿನಲ್ಲಿ ಅಂತಾರಾಷ್ಟ್ರೀಯ ಅರಣ್ಯ ಸಂರಕ್ಷಣೆ ಅಂಗವಾಗಿ ಶಿಕ್ಷಕೇತರ ಸಿಬ್ಬಂದಿಗಳಿಗೆ ಆಯೋಜಿಸಿದ್ದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರು ಕನಿಷ್ಠ ಹತ್ತು ಸಸಿಗಳನ್ನು ನೆಟ್ಟು ಪೋಷಿಸಬೇಕಾದ ಅನಿವಾರ್ಯತೆ ಇದೆ ಎಂದರು.

ಸಿಬ್ಬಂದಿ ವರ್ಗದವರು ಕರ್ತವ್ಯ ನಿರ್ವಹಿಸುವ ಸಮಯದಲ್ಲಿ ಮಾನಸಿಕ ಒತ್ತಡಕ್ಕೆ ಒಳಗಾಗದೆ ನಿಷ್ಠೆ ಪೂರ್ಣವಾಗಿ ಕಾರ್ಯವನ್ನು ನಿರ್ವಹಿಸಿದರೆ ಜೀವನದ ಯಶಸ್ಸು ಸಾಧ್ಯ. ಇಂತಹ ಮಾನಸಿಕ ಒತ್ತಡದಿಂದ ಹೊರಬರಲು ಇನ್ನಿತರ ಚಟಕ್ಕೆ ಕುಡಿತ, ಗುಟಕಾ ಮತ್ತು ಸಿಗರೇಟ ಸೇವನೆಯಂತಹ ಮಾರಕ ಚಟಕ್ಕೆ ಅಂಟಿಕೊಂಡರೆ ಅನಾರೋಗ್ಯಕ್ಕೆ ತುತ್ತಾಗುತ್ತಾರೆಯೇ ವಿನಃ ಮಾನಸಿಕ ಒತ್ತಡದಿಂದ ಹೊರ ಬರಲು ಸಾಧ್ಯವಿಲ್ಲ ಎಂದರು.

ಪ್ರಾಚಾರ್ಯ ಡಾ. ಎಸ್.ಬಿ. ವಣಕುದುರೆ ಮಾತನಾಡಿ, ಟೆಕ್ವಿಪ್ 1.2 ಯೋಜನೆ ಅಡಿಯಲ್ಲಿ ಇಂತಹ ಕಾರ್ಯಾಗಾರಗಳನ್ನು ಏರ್ಪಡಿಸುತ್ತಾ ಬಂದಿದ್ದು ಇದರ ಸದುಪಯೋಗವನ್ನು ಸಿಬ್ಬಂದಿ ವರ್ಗವು ಪಡೆದುಕೊಳ್ಳಬೇಕೆಂದು ಹೇಳಿದರು.

ಕಾರ್ಯಾಗಾರದಲ್ಲಿ ಮೇಘಾ ಹುಕ್ಕೇರಿ, ಪ್ರತಿಭಾ ಸೋನೆಕರ, ವೀಣಾ ದೇಸಾಯಿ, ಸುಮನಾ ಕುಮಾರಿ, ಹೇಮಾ ಕುಕನೂರ ಹಾಗೂ ಎಲ್ಲ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿ ಕವಿವಿಯ ಪ್ರೊ. ಕಿನಗಿ ಉಪನ್ಯಾಸ ನೀಡಿದರು. ಡಾ. ಮೃತ್ಯುಂಜಯ ಕಪ್ಪಾಳಿ, ಕಾರ್ಯಾಗಾರದ ಮಹತ್ವವನ್ನು ವಿವರಿಸಿದರು. ಫಕ್ಕೀರಪ್ಪ, ಪಿ.ವಿ. ಗಂಗಾಧರ ರಾವ್, ಸುರೇಶ ಶೆಟ್ಟಿ, ಸೀಮಾ ಕೋಟ್ಕರ್ ಕಾರ್ಯಕ್ರಮ ನಿರ್ವಹಿಸಿದರು.